ಹೇಮಂತಕುಮಾರ್, ಬೆಂಗಳೂರು
*ಮಿಂಚು, ಗುಡುಗು ಬಂದಾಗ ಹೆಂಡತಿಯೇಕೆ ಗಂಡನನ್ನು ತಬ್ಬಿಕೊಳ್ಳುತ್ತಾಳೆ?*



ನನಗಿಂತ ದೊಡ್ಡ ಮಿಂಚು, ಗುಡುಗು ಇಲ್ಲ; ಹೆದರಬೇಡ ಎಂದು ಆಶ್ವಾಸನೆ ನೀಡಲು!

ಪೇಂಟರ್ ಪಾಪು, ಸಂತೇಮರಹಳ್ಳಿ
*ಜೀವನದಲ್ಲಿ ಎಷ್ಟು ಬಣ್ಣಗಳಿವೆ?*
ತಾಳಿ, ಲೆಕ್ಕ ಹಾಕೋಣ; ಬಾಬಣ್ಣ, ಸುಬ್ಬಣ್ಣ, ಶರಬಣ್ಣ, ವಿಠೋಬಣ್ಣ, ಸಾಂಬಣ್ಣ, ಸಾಹೇಬಣ್ಣ...

ಓಂಚನ್ನೇಶ್, ಭದ್ರಾವತಿ
*ಸಾದಾ ಕಣ್ಣೀರಿಗೂ, ಆನಂದಬಾಷ್ಪಕ್ಕೂ ಏನು ವ್ಯತ್ಯಾಸ?*
ಕಣ್ಣೀರು ಬೇಡಿಕೆ; ಆನಂದಬಾಷ್ಪ ರಸೀದಿ.

ಸಿ.ನಾಗರಾಜ, ಭದ್ರಾವತಿ
*ಜಾತಕಫಲ ನೋಡಿ ಮದುವೆ ಮಾಡಿದರೂ ಗಂಡ ಹೆಂಡತಿ ಡೈವೋರ್ಸ್ ಆಗಿದ್ದಾರಲ್ಲಾ...?*
ಅವರ ತಪ್ಪಿಲ್ಲ. ವಕೀಲರ ಜಾತಕದಲ್ಲಿ ಇವರನ್ನು ಬೇರ್ಪಡಿಸುವ ಯೋಗ ಇತ್ತಂತೆ.

ಎನ್. ವಸಂತಾ, ಕತ್ತರಿಗುಪ್ಪ
*'ನಾಯಿಯಿದೆ, ಎಚ್ಚರಿಕೆ' ಎಂಬ ಫಲಕದ ಬದಲು 'ನಾಯಿಯುಂಟು, ಒಳಗೆ ಬನ್ನಿ' ಎಂದು ಬದಲಾಯಿಸಿದರೆ...?*




ಅದನ್ನು ನಾಯಿ ಮಾರುವವನ ಮನೆ ಎಂದು ಗುರುತಿಸಲಾಗುತ್ತದೆ.

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಅಲ್ಲಿದ್ದರೂ ಚಿಂತೆ, ಇಲ್ಲಿದ್ದರೂ ಚಿಂತೆ. ಚಿಂತೆಗಳ ಕಂತೆ ಹೊತ್ತವರಿಗೆ ನಿಮ್ಮ ದಿವ್ಯೌಷಧದಂತಹ ಸಲಹೆ?*
ನೆನ್ನೆಯ ಪೋಸ್ಟ್‌ಮಾರ್ಟಂ ಬಿಟ್ಟು ಇಂದಿನ ದಿನದ ಬಯಾಪ್ಸಿ ಮಾಡಿದರೆ ನಾಳೆಯ ಆರೋಗ್ಯ ಖಚಿತ.

ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್
*ಕೆಲ ಆಂಟಿಯರು ಮಗಳಿಗಿಂತ ಹೆಚ್ಚು ಮೇಕಪ್ ಮಾಡಿಕೊಳ್ಳಲು ಕಾರಣವೇನು?*
ತಮ್ಮ ರೂಪ ದೃಷ್ಟಿದೋಷವಿರುವ ಅಂಕಲ್‌ಗಳಿಗೂ ಎದ್ದು ಕಾಣಲೆಂದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ನಮ್ಮ ದೇಶದಲ್ಲಿ ಮೊದಲು ಗಂಡನಿಗೆ ಉಣಬಡಿಸಿ ನಂತರ ಹೆಂಡತಿ ಉಣ್ಣುತ್ತಾಳೆ ಏಕೆ?*
ವಿಜ್ಞಾನಸೂತ್ರದ ಪ್ರಕಾರ ಏನೇ ಪ್ರಯೋಗ ಮಾಡಬೇಕಾದರೂ ಮೊದಲು ಪ್ರಾಣಿಗಳ ಮೇಲೆಯೇ.

ಮುರಳೀಧರ್, ಬೆಂಗಳೂರು
*ಜಾತಕ- ಇದರ ನಿಜವಾದ ಅರ್ಥ?*
ಜಾಡು, ತಹಬಂದಿಗಳ ಕರ್ಮಪತ್ರ.

ವಿ.ಪಿ. ಶಂಕರ್, ಶಿವಮೊಗ್ಗ
*ಅವಳೇಕೆ ನನ್ನನ್ನು ಕಂಡಕೂಡಲೆ ಜೋಕೆ, ನಾನು ಮಿಂಚಿನ ಬಳ್ಳಿ ಎಂದು ವಯ್ಯಾರವಾಗಿ ಗುನುಗುತ್ತಾಳೆ?*
ತಿಳಿಯಿತು. ಅವಳು 'ಹಾನಿಕರ' ಎಂದು ಹೇಳುತ್ತಲೇ ಕೈಗೆಟಕುವ ಸಿಗರೇಟ್ ಪ್ಯಾಕ್‌ನ ಜಾತಿಯವಳು!

ಪಿ. ಗೋವಿಂದರಾಜ್, ಶಿವಮೊಗ್ಗ
*ಅಜ್ಞಾನದ ಕತ್ತಲಿಗೂ, ಅಹಂಕಾರದ ಕತ್ತಲಿಗೂ ಇರುವ ವ್ಯತ್ಯಾಸವೇನು?*
ಒಂದು ಸ್ವಿಚ್ ಹಾಕಿದರೆ ಬೆಳಗಬಹುದಾದ ಟ್ಯೂಬ್‌ಲೈಟ್, ಇನ್ನೊಂದು ಟಂಗ್‌ಸ್ಟನ್ ಕಿತ್ತುಹೋಗಿರುವ ಬಲ್ಬ್.

ಎಂ.ಸಿ. ಅರುಣ್ ಕುಮಾರ್, ಮೈಸೂರು
*ನಾನು ತೃಪ್ತ, ನೂರು ರೂಪಾಯಿಯನ್ನು ನೂರು ಕೋಟಿ ಎಂದು ಭಾವಿಸುವೆ. ಹಾಗಾದರೆ ನಾನೇ ಪ್ರಪಂಚದ ಅತ್ಯಂತ ಶ್ರೀಮಂತನಲ್ಲವೆ?*
ಹೋಗಿ ಒಂದು ಕಿಲೋ ಹುರುಳಿಕಾಯಿ ತೆಗೆದುಕೊಂಡು ಬನ್ನಿ. ನಿಮ್ಮ ಭ್ರಮೆ ತಾನಾಗೇ ಕರಗುತ್ತದೆ.

ನೇ.ಗೋ.ಭ. ಕುಕ್ಕೆಸುಬ್ರಹ್ಮಣ್ಯ
*ಸುಮಾರು ಆರು ಲಕ್ಷ ಓದುಗರು ನಿಮಗೆ ಬಿಡುವ ಬಾಣಗಳನ್ನು ಸಹಿಸಿಕೊಳ್ಳಲು ನೀವೇನು ಆಧುನಿಕ ಭೀಷ್ಮಪಿತಾಮಹರೇ?*
ಎಲ್ಲವೂ ಸುಮಕೋಮಲ ಮೊನೆಗಳಿರುವ ಪ್ರೀತಿಯ ಬಾಣಗಳಾಗಿರುವಾಗ ಇದಕ್ಕಿಂತ ಸಂತಸವುಂಟೆ ಭಟ್ಟರೆ!

## ಬಹುಮಾನಿತ ಪ್ರಶ್ನೆ

ಎಸ್.ಎ. ಮೋಹನರಾಜು, ಶಿವಮೊಗ್ಗ
*ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ; ಏನು ಮಾಡುವುದು ರಾಮ್‌ಜೀ? ತಮಾಷೆ ಬೇಡ.*
ಎರಡೇ ದಾರಿ; ಸಂಪಾದನೆ ಹೆಚ್ಚಿಸಿಕೊಳ್ಳಿ ಅಥವಾ ಬಿಟ್ಟಿ ಊಟ ಹಾಕುವ ಮಠ ಸೇರಿ.

ಆರ್. ಮಧುಸೂದನ್, ಹಾಸನ
*ಕಾಮ ಮತ್ತು ಪ್ರೇಮ ಅಣ್ಣ-ತಮ್ಮನೋ ಅಥವಾ ಅಕ್ಕ-ತಂಗೀನೋ?*
ಗಂಡು–ಹೆಣ್ಣು. ಕಾಮವಿಲ್ಲದ ಪ್ರೇಮ ಶುದ್ಧಕನ್ಯೆ. ಪ್ರೇಮವಿಲ್ಲದ ಕಾಮ ಅಪೂರ್ಣ. ಎರಡೂ ಮೇಳೈಸಿದರೆ ಸಂಸಾರ!

ಡೈರಿ ವಿಶ್ವನಾಥ್, ಬೆಂಗಳೂರು
*ರಾಹುಕಾಲದಲ್ಲಿ ಮದುವೆಯಾದರೆ ಏನಾಗುತ್ತೆ?*
ಸೋಮವಾರ, ಶುಕ್ರವಾರ, ಶನಿವಾರವಾದರೆ ಪರವಾಗಿಲ್ಲ. ಮಿಕ್ಕ ದಿನ ಊಟಕ್ಕೆ ಲೇಟ್ ಆಗತ್ತೆ.

ಎಸ್.ಜಿ. ಕರನಂದಿ, ಹುನಗುಂದ
*ಹನಿಹನಿ ಕೂಡಿದರೆ ಹಳ್ಳ, ತೆನೆತೆನೆ ಕೂಡಿದರೆ ಬಳ್ಳ; ತಲೆ ತಲೆ ಕೂಡಿದರೆ?*



ಡ್ಯಾಂಡ್ರಫ್ ವಿನಿಮಯ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ವಿತ್ತಸಚಿವರಾದರೆ ರೂಪಾಯಿಗೆ ಎಪ್ಪತ್ತು ಡಾಲರ್ ಸಿಗುತ್ತದೆಯೇ?*
ಖಂಡಿತ; ಬಳೆ ಅಂಗಡಿಯಲ್ಲಿ, ಟ್ರೇಡ್ ಆಟದ ಕರೆನ್ಸಿಯಲ್ಲಿ!

ಪಿ.ಜೆ. ರಾಘವೇಂದ್ರ, ಮೈಸೂರು
*ರಾಜಕಾರಣಿಗಳೇಕೆ ಮರಣ ಶಾಸನ ಬರೆಯುವುದಿಲ್ಲ?*
ಶಾಸನ ಎಂದಿರುವ ಎಲ್ಲವನ್ನೂ ಧಿಕ್ಕರಿಸುವುದೇ ಅವರ ಜೀವನರೀತಿಯಾದ್ದರಿಂದ.

■ ರಾಮ್